ಮುಂಜಾವು
ವಾರಪತ್ರಿಕೆ.
ಸಂಪಾದಕ; ಸಿರಿಮನೆ ನಾಗರಾಜ್.

MUNJAVU Kannada Weekly. KOPPA - CHM. ಫೋನ್ : 114
ನೇ ವರ್ಷ 39 ನೇ ಸಂಚಿಕೆ ಕೊಪ್ಪ 1-5-1988 ಭಾನುವಾರ ಬೆಲೆ 25 ಪೈಸೆ

ಗುಬ್ಬಗದ್ದೆ ಕಾಡು ಕಡಿತಕ್ಕೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ

ಸಿವಿಲ್ ಕೋರ್ಟಿನಲ್ಲೂ ತಡೆ; ನಾಗರಿಕರ ಹೋರಾಟದ ಸಿದ್ಧತೆ ಮುಂದುವರಿಕೆ

ಕೊಪ್ಪ: ಇಲ್ಲಿಗೆ ಸಮೀಪದ ಗುಬ್ಬಗದ್ದೆ ಕಾಡಿನಲ್ಲಿ ಮರಗಳನ್ನು ಕಡಿಯುವುದರ ವಿರುದ್ಧ ಚಿಕ್ಕಮಗಳೂರಿನ ರಜಾಕಾಲದ ನ್ಯಾಯಾಧೀಶರಿಂದ ಹಾಗೂ ಸುಪ್ರೀಂ ಕೋರ್ಟ್‌ನಿಂದ ತಡೆಯಾಜ್ಞೆಗಳು ಬಂದಿವೆ. ಇದರಿಂದಾಗಿ ಏ. 20-21ರಿಂದ ಅನಧಿಕೃತವಾಗಿ ಮರ ವ್ಯಾಪಾರಿಗಳು ಆರಂಭಿಸಿದ್ದ ಮರ ಕಡಿತಲೆಯನ್ನು ಪೂರ್ಣವಾಗಿ ನಿಲ್ಲಿಸಲಾಗಿದೆ.

ಹೈಕೋರ್ಟಿನ ವಿಭಾಗ ಪೀಠ ಎಂ. ಇ. ಸ್ಮೈಲ್ ಮತ್ತಿತರ ಮೂವರಿಗೆ ಗುಬ್ಬಗದ್ದೆ ಕಾಡಿನ ಬದಲಿಸಿದ ಸ್ಕೆಚ್ ಆಧಾರದ 50 ಎಕರೆ ಪ್ರದೇಶದ ಮೇಲೆ ಹಕ್ಕು ಇದೆಯೆಂದು ನೀಡಿರುವ ತೀರ್ಪಿನ ವಿರುದ್ಧ ಅರಣ್ಯ ಇಲಾಖೆ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ಮೇಲ್ಮನವಿಯಲ್ಲಿ 'ಎಕ್ಸ್‌ಪಾರ್ಟೆ' ತಡೆಯಾಜ್ಞೆಯನ್ನು ಏ. 29ರಂದು ನೀಡಿರುವುದಾಗಿ ದೆಹಲಿಯಿಂದ ಇಲ್ಲಿನ ಅರಣ್ಯ ಇಲಾಖೆಗೆ ಟೆಲಿಗ್ರಾಂ ಬಂದಿದೆ.

ಅದಕ್ಕೆ ಮೊದಲೇ ಚಿಕ್ಕಮಗಳೂರು ಕೋರ್ಟಿನಲ್ಲಿ ಸಾಹಿತಿ ಕೆ. ಪಿ. ಪೂರ್ಣಚಂದ್ರ ತೇಜಸ್ವಿ, ಪತ್ರಕರ್ತರಾದ ಗಿರಿಜಾಶಂಕರ್ ಮತ್ತು ಬಿ. ಎಸ್. ವಿದ್ಯಾನಂದ ಭಟ್ ಹೂಡಿದ್ದ ಸಾರ್ವಜನಿಕ ಹಿತಾಸಕ್ತಿಯ ಮೊಕದ್ದಮೆಯಲ್ಲಿ ಏ. 26ರಂದೇ ತಡೆಯಾಜ್ಞೆ ದೊರೆತಿದ್ದು, 27ರ ಬೆಳಗಿನಿಂದಲೇ ಮರ ಕಡಿತವನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಎ. ಬಿ. ಅಪ್ಪಣ್ಣ ಮತ್ತು ಸಿಬ್ಬಂದಿ ನಿಲ್ಲಿಸಿದ್ದರು.

ಅಲ್ಲಿಯವರೆಗೆ ಮರ ಕಟುಕರು ಕಡಿದುರುಳಿಸಿರುವ 312 ಮರಗಳನ್ನು ಅಧಿಕಾರಿಗಳು ವಿವರವಾಗಿ ಪಟ್ಟಿ ಮಾಡಿದ್ದಾರೆ. ಹೈಕೋರ್ಟಿನ ಏಕ ಸದಸ್ಯ ಪೀಠದ ತೀರ್ಪಿನಲ್ಲಿ ಕೂಡ, ಕಾಯಿದೆಯ ಎಲ್ಲಾ ಕ್ರಮಗಳನ್ನೂ ಅನುಸರಿಸಿ ಕಡಿಯಬೇಕೆಂದು ಸ್ಪಷ್ಟಪಡಿಸಿದ್ದರೂ, ಇಲಾಖೆಯಿಂದ ಲಿಖಿತ ಪರವಾನಗಿ ತೆಗೆದುಕೊಳ್ಳದೆ ಕಡಿತ ಆರಂಭಿಸಿದ ಬಗ್ಗೆ ಏಕೆ ಕ್ರಮ ತೆಗೆದುಕೊಳ್ಳಬಾರದೆಂದು ಮೇ 10ರೊಳಗೆ ವಿವರಣೆ ನೀಡುವಂತೆ ಅಪ್ಪಣ್ಣ ಅವರು ಮರ ವ್ಯಾಪಾರಿಗಳಿಗೆ ನೋಟೀಸು ನೀಡಿದ್ದಾರೆ.

ಶ್ರೀಮತಿ ಶಾರದಮ್ಮ ಮತ್ತು ಇತರ ಮೂವರು 1.3.81ರಲ್ಲಿ ಕೊಂಡ 50 ಎಕರೆ ಜಮೀನಿನ ಚಕ್ಕುಬಂದಿಗೂ, ಅವರು 1.7.81ರಲ್ಲಿ ಮರು ಮಾರಲು ಮಾಡಿಕೊಂಡಿರುವ ಕರಾರಿನಲ್ಲಿ ಕಾಣಿಸಿರುವ 50 ಎಕರೆಯ ಚಕ್ಕುಬಂದಿಗೂ ಇರುವ ಅಂಗೈಯಷ್ಟು ಸ್ಪಷ್ಟವಾದ ವ್ಯತ್ಯಾಸವನ್ನು ಮೇಲ್ಕಂಡ ಸಾರ್ವಜನಿಕ ಮೊಕದ್ದಮೆಯಲ್ಲಿ ಎತ್ತಿ ತೋರಿಸಲಾಗಿದೆ.

ಹೈಕೋರ್ಟ್ ವಿಭಾಗ ಪೀಠದ ತೀರ್ಪನ್ನು ಚಿಕ್ಕಮಗಳೂರು ಕೋರ್ಟಿನಲ್ಲಿ ಹಾಜರುಪಡಿಸಿ, ಈ ಪ್ರಕರಣವನ್ನು ಕೈ ಬಿಡುವಂತೆ ಹಾಗೂ ತಡೆಯಾಜ್ಞೆ ತೆರವು ಮಾಡುವಂತೆ ಮರ ವ್ಯಾಪಾರಿಗಳು ಮಾಡಿದ್ದ ಮನವಿಯ ವಿಚಾರಣೆ 29ರಂದು ಮುಗಿದಿದ್ದು, ಈ ಬಗ್ಗೆ ಮೇ 2ರಂದು ತೀರ್ಪು ಬರುವ ನಿರೀಕ್ಷೆಯಿದೆ.

ಚಿಕ್ಕಮಗಳೂರು ಕೋರ್ಟಿನ ತಡೆಯಾಜ್ಞೆ ಒಂದು ವೇಳೆ ತೆರವಾದರೂ ಸುಪ್ರೀಂ ಕೋರ್ಟ್ ತಡೆಯಾಜ್ಞೆ ಇರುವುದರಿಂದ ಮರ ಕಡಿತ ಸದ್ಯಕ್ಕೆ ನಿಲ್ಲಲಿದೆ. ಆದರೆ, ಈ ಹೋರಾಟ ಗುರಿ ಮುಟ್ಟಲು ಸುತ್ತ ಮುತ್ತಲಿನ ಜನತೆ ಈ ಬಗ್ಗೆ ಕೊನೆತನಕ ಆಸಕ್ತಿ, ಬೆಂಬಲ ಉಳಿಸಿಕೊಂಡು ಬರಬೇಕಾಗಿದೆ.

ಈ ಹೋರಾಟದಲ್ಲಿ ಈವರೆಗೆ ಎಲ್ಲ ರೀತಿಯಲ್ಲಿ ನೆರವು ನೀಡಿದವರೆಲ್ಲರಿಗೂ 'ಗುಬ್ಬಗದ್ದೆ ಅರಣ್ಯ ರಕ್ಷಣಾ ಹೋರಾಟ ಸಮಿತಿ' ಅಭಿನಂದನೆ ಸಲ್ಲಿಸಿದ್ದು, ಈ ಕಾರ್ಯಕ್ಕೆ ಹಣ ಕಾಸಿನ ನೆರವು ನೀಡಬಯಸುವವರು ಅದನ್ನು ಸಮಿತಿಯ ಹೆಸರಿಗೆ "ಕೇರಾಫ್ 'ಮುಂಜಾವು' ವಾರಪತ್ರಿಕೆ, ಕೊಪ್ಪ, ಚಿಕ್ಕಮಗಳೂರು ಜಿಲ್ಲೆ"– ಈ ವಿಳಾಸಕ್ಕೆ ಕಳಿಸಲು ವಿನಂತಿಸಿದೆ.

ಕಾರ್ಮಿಕ ಸಂಘ ಮುರಿಯಲು ಮಾಲೀಕರ ಕಿರುಕುಳ:

ಶಂಕರ್ ಸಾರಿಗೆಯಲ್ಲಿ ಮತ್ತೆ ಮುಷ್ಕರದ ಛಾಯೆ

ಕೊಪ್ಪ : ಕಳೆದ ಮೂರು ವರ್ಷಗಳಿಂದ ತಮ್ಮ ನ್ಯಾಯಯುತ ಬೇಡಿಕೆಗಳಿಗಾಗಿ ಚಳುವಳಿ, ಮುಷ್ಕರ ನಡೆಸಿ, ಈಚೆಗಷ್ಟೇ ಹಲವು ಬೇಡಿಕೆಗಳನ್ನು ತೃಪ್ತಿಕರ ಎನ್ನಬಹುದಾದ ರೀತಿಯಲ್ಲಿ ಈಡೇರಿಸಿಕೊಂಡಿರುವ ಶಂಕರ್ ಕಂಪೆನಿ ಕಾರ್ಮಿಕರನ್ನು ಸಂಸ್ಥೆಯ ಆಡಳಿತ ವರ್ಗ ಪುನಃ ಮುಷ್ಕರದ ಅಂಚಿಗೆ ದೂಡಿದ್ದು, ಮೇ 10 ರಿಂದ ಸಂಸ್ಥೆಯಲ್ಲಿ ಮತ್ತೊಮ್ಮೆ ಮುಷ್ಕರದ ಕರಾಳ ಛಾಯೆ ಆವರಿಸಿದೆ.

ಸಂಘದ ಚಟುವಟಿಕೆಗಳಲ್ಲಿ ಸಕ್ರಿಯನಾಗಿರುವ ಪ್ರಮುಖ ಕೆಲಸಗಾರರ ಮೇಲೆ ಉದ್ದೇಶಪೂರ್ವಕವಾಗಿ ಸುಳ್ಳು ಸುಳ್ಳೇ ಗುರುತರವಾದ ಆರೋಪಗಳನ್ನು ಹೊರಿಸಿ, ನೆಪ ಮಾತ್ರದ 'ವಿಚಾರಣೆ' ನಡೆಸಿ ಅವರನ್ನು ಕೆಲಸದಿಂದ ವಜಾ ಮಾಡಲಾಗುತ್ತಿದೆ ಅಥವಾ ಅಮಾನತಿನಲ್ಲಿಟ್ಟು ಅವರನ್ನು ಆರ್ಥಿಕವಾಗಿ ಚಿತ್ರಹಿಂಸೆಗೆ ಗುರಿಮಾಡಲಾಗುತ್ತಿದೆ. ಈ ರೀತಿ ಈವರೆಗೆ 14 ಮಂದಿ ಕೆಲಸಗಾರರನ್ನು ವಜಾ ಮಾಡಿ, 8 ಜನರನ್ನು ಅಮಾನತಿನಲ್ಲಿಡಲಾಗಿದೆ. ಕ್ಷುಲ್ಲಕ ನೆಪಗಳ ಮೇಲೆ ಅಮಾನತುಗೊಳಿಸುವ ಹೂಟ ದಿನವಹಿ ಎಂಬಂತೆ ನಡೆಯುತ್ತಿದೆ– ಎಂದು ಕಾರ್ಮಿಕರು ಆರೋಪಿಸಿದ್ದಾರೆ.

ಹಲ್ಲೆ ; ಖಂಡನೆ

ಇದಲ್ಲದೆ, ಇಂಥ ಕಾರ್ಮಿಕ ಮುಂದಾಳುಗಳ ಮೇಲೆ ಮಾರಕವಾದ ಹಲ್ಲೆಗಳನ್ನು ಸಹ ಮಾಲೀಕ ವರ್ಗ ಗೂಂಡಾಗಳ ಮೂಲಕ ನಡೆಸುತ್ತಿದೆ. ಕಳೆದ ವರ್ಷ ಚಳುವಳಿಯ ವೇಳೆ ಹಲ್ಲೆಗೀಡಾಗಿದ್ದ ಸಮರ್ಥ ಕಾರ್ಮಿಕ ಮುಂದಾಳು ಚಿಕ್ಕೇಗೌಡರ ಮೇಲೆ ಕಳೆದ ವಾರ ರಾತ್ರಿ 2 ಗಂಟೆಯ ಸುಮಾರಿಗೆ ಅವರ ರೂಮಿಗೆ ನುಗ್ಗಿ ಪುನಃ ತೀವ್ರವಾಗಿ ಹಲ್ಲೆ ನಡೆಸಿ, ಸಂಘದ ದಾಖಲೆಗಳಲ್ಲಿ ಹಲವನ್ನು ಕದಿಯಲಾಗಿದೆ ಎಂದಿರುವ ಕಾರ್ಮಿಕರು, ಈ ಕೃತ್ಯವನ್ನು ಉಗ್ರವಾಗಿ ಖಂಡಿಸಿದ್ದಾರೆ.

ವಾಸ್ತವ

ಕಾರ್ಮಿಕ ಸಂಘಗಳಿರುವುದು ಇಂದು ಅತ್ಯಂತ ವಾಸ್ತವದ ಸಂಗತಿ. ಇದನ್ನು ಮನಸ್ಸಿನಲ್ಲಿ ಅರಗಿಸಿಕೊಂಡು, ಕಾರ್ಮಿಕರೊಂದಿಗೆ ಸೌಹಾರ್ದ ವರ್ತನೆಯ ಮೂಲಕ ಇಡೀ ಸಂಸ್ಥೆಯ ಅಭಿವೃದ್ಧಿ ಸಾಧಿಸಬೇಕಾಗಿದೆ. ಆದರೆ 25 ವರ್ಷಗಳಲ್ಲಿ ಸಂಸ್ಥೆಯು 20 ಬಸ್‌ಗಳಿಂದ 70 ಬಸ್‌ಗಳಷ್ಟು ಬೃಹತ್ತಾಗಿ ಬೆಳೆದಿರುವುದರಲ್ಲಿ ಕಾರ್ಮಿಕರ ಪರಿಶ್ರಮದ್ದೇ ಸಿಂಹ ಪಾಲು ಎಂಬುದನ್ನು ಒಪ್ಪಲಾರದೆ ಪದೇ ಪದೇ ಮುಷ್ಕರಕ್ಕೆ ದೂಡುತ್ತಿರುವ ಮಾಲೀಕ ವರ್ಗವನ್ನು ಸಾರ್ವಜನಿಕರು ಕ್ಷಮಿಸಲಾರರು ಎಂದು ಸಂಘದ ಪ್ರಕಟಣೆ ತಿಳಿಸಿದೆ.

ಸಂಧಾನಕ್ಕೆ ಅಸಡ್ಡೆ

ಇಂಥ ಅನ್ಯಾಯಗಳನ್ನು ನಿವಾರಿಸಿಕೊಳ್ಳಲು ಸಂಘ ಸಂಧಾನದ ಮಾತುಕತೆಗೆ
(4ನೇ ಪುಟಕ್ಕೆ)

ಅಶ್ರುತರ್ಪಣ

ಅಗಲಿದ ಕೊಡುಗೈ ದೊರೆ ಜಯಪುರದ ಅಚ್ಚಣ್ಣ ಶೆಟ್ಟರು

60ರ ದಶಕದಲ್ಲಿ ಜಯಪುರದ ಪ್ರಸಿದ್ಧ ವರ್ತಕರಾಗಿದ್ದ ಕೊಡುಗೈ ದಾನಿ ಬಿ. ಅಚ್ಯುತ ನಾರಾಯಣ ಶ್ರೇಷ್ಠಿಯವರು ಕೆಲವು ಕಾಲದಿಂದ ಅನಾರೋಗ್ಯದಿಂದ ಬಳಲುತ್ತಿದ್ದು, ಏ. 16ರಂದು ಶಿವಮೊಗ್ಗದ ತಮ್ಮ ಮನೆಯಲ್ಲಿ ನಿಧನರಾದರು.

ಆತ್ಮೀಯರು ಮತ್ತು ಜನಸಾಮಾನ್ಯರಿಗೆ 'ಅಚ್ಚಣ್ಣ ಶೆಟ್ರು' ಎಂದೇ ಪರಿಚಿತರಾಗಿದ್ದ ಅವರ ನಿಧನದ ಸುದ್ದಿ ತಿಳಿಯುತ್ತಿದ್ದಂತೆ ಇಡೀ ಜಯಪುರದಲ್ಲಿ ಎಲ್ಲಾ ಅಂಗಡಿ-ಮುಂಗಟ್ಟುಗಳೂ ಬಾಗಿಲು ಮುಚ್ಚಿದವು. ಅಪರೂಪದ ಇಂಥ ಶೋಕಾಚರಣೆಯ ಮೂಲಕ ಜಯಪುರದ ಜನತೆ ಅಗಲಿದ ಈ ಸಹೃದಯಿಗೆ ಶ್ರದ್ಧಾಂಜಲಿ ಸಲ್ಲಿಸಿತು. ಅಲ್ಲದೆ ಸಂಜೆ ಸಾರ್ವಜನಿಕ ಶ್ರದ್ಧಾಂಜಲಿ ಕಾರ್ಯಕ್ರಮವೂ ನಡೆಯಿತು.

ಧರ್ಮಭೀರು

ಬೂಟಾಟಿಕೆ, ಡಾಂಭಿಕತನಗಳೇ 'ಧಾರ್ಮಿಕತೆ' ಎನ್ನಿಸಿರುವ ಇಂದಿನ ದಿನಗಳಿಗೆ ಹೋಲಿಸಿದರೆ ಶೆಟ್ಟರು ನಿಜವಾದ ಅರ್ಥದಲ್ಲಿ ಅತ್ಯಂತ ದೈವಭಕ್ತರೂ ಧರ್ಮಭೀರುವೂ ಆಗಿದ್ದವರು. ಸುಮಾರು 18-20 ವರ್ಷಗಳ ಹಿಂದೆಯೇ 50 ಸಾವಿರ ರೂ. ವೆಚ್ಚದಲ್ಲಿ ಜಯಪುರದಲ್ಲಿ ನಗರೇಶ್ವರ ಮತ್ತು ಕನ್ನಿಕಾಪರಮೇಶ್ವರಿ ದೇವಸ್ಥಾನಗಳನ್ನು ಕಟ್ಟಿ ಜನತೆಗೆ ಅರ್ಪಿಸಿದ್ದರು.

ಮೂಕ ಪಶುಗಳ ಬಗ್ಗೆಯೂ ಅನಾಥ ಜನರ ಬಗ್ಗೆಯೂ ಅಪಾರ ಕಳಕಳಿ ಹೊಂದಿದ್ದ ಶೆಟ್ಟರು ತಮ್ಮ ಅಕ್ಕ ಸುಬ್ಬಮ್ಮನವರ ನೆನಪಿಗಾಗಿ ಜಯಪುರದಲ್ಲಿ ಕಟ್ಟಿಸಿರುವ ಪಶುವೈದ್ಯ ಶಾಲೆ ಇಂದಿಗೂ ಉತ್ತಮವಾಗಿ ಕೆಲಸ ನಿರ್ವಹಿಸುತ್ತಿದೆ. ದೂರದ ಮಾಲೂರಿನ ಅನಾಥ ಸೇವಾಶ್ರಮಕ್ಕೂ ಇವರು ಆ ಕಾಲದಲ್ಲೇ 5 ಸಾವಿರ ರೂ. ದೇಣಿಗೆ ಕೊಟ್ಟಿದ್ದರು.

ಕೃಷ್ಣ ಭಂಡಾರಿ
ಜಯಪುರ.

ವಿದ್ಯಾ ಸಂಸ್ಥೆಗಳಿಗೆ ಉತ್ತೇಜನ

ಶೆಟ್ಟರ ಕೊಡುಗೈಯ ಪ್ರಯೋಜನ ಪಡೆದ ಇನ್ನೊಂದು ಸಮಾಜ ಸೇವಾ ಕಾರ್ಯವೆಂದರೆ ವಿದ್ಯಾ ಸಂಸ್ಥೆಗಳ ಅಭಿವೃದ್ಧಿ. 25 ವರ್ಷಗಳ ಹಿಂದೆಯೇ ಜಯಪುರದ ಪ್ರೌಢಶಾಲೆಗೆ ತಮ್ಮ ಪಾಲಿನ 10 ಸಹಸ್ರ ರೂ.ಗಳ ದೇಣಿಗೆ ನೀಡಿ, ಆಡಳಿತ ಸಮಿತಿಯ ಪ್ರಥಮ ಅಧ್ಯಕ್ಷರಾಗಿ ಶೆಟ್ಟರು ಸಂಸ್ಥೆಯನ್ನು ಕಟ್ಟಿ ಬೆಳೆಸಲು ಮೂಲ ಕಾರಣರಾದವರು. ಶೃಂಗೇರಿಯ ಕಾಲೇಜಿಗೂ 60ರ ದಶಕದಲ್ಲಿ 15 ಸಾವಿರ ರೂ. ಗಳನ್ನು ನೀಡಿದ್ದರು.

ಭದ್ರಾವತಿ, ಶಿವಮೊಗ್ಗಗಳ ಕನ್ನಿಕಾಪರಮೇಶ್ವರಿ ದೇವಾಲಯಗಳಿಗೂ ತಲಾ 5 ಸಾವಿರ ರೂ.ಗಳ ದೇಣಿಗೆ ನೀಡಿದ್ದ ಶೆಟ್ಟರು. "ಕೊಟ್ಟಿದ್ದು ತನಗೆ, ಬಚ್ಚಿಟ್ಟಿದ್ದು ಪರರಿಗೆ" ಎಂಬ ಉಕ್ತಿಗೆ ತಮ್ಮ ಬದುಕನ್ನೇ ಒಂದು ನಿದರ್ಶನವಾಗಿಸಿದವರೆನ್ನಬಹುದು.


ಕಠಿಣ ಪರಿಶ್ರಮಿ

ಜೇಲೂರಿನ ಗೌರಮ್ಮ ಮತ್ತು ಶ್ಯಾಮಶೆಟ್ಟಿ ದಂಪತಿಗಳಿಗೆ ಮಗನಾಗಿ 1917ರಲ್ಲಿ ಜನಿಸಿದ ಅಚ್ಚಣ್ಣ ಶೆಟ್ಟರು ಬಾಲ್ಯದಲ್ಲಿ ತೀವ್ರ ಬಡತನದಲ್ಲಿ ಬಳಲಿದವರು. ಚಿಕ್ಕಂದಿನಲ್ಲಿ ತಮ್ಮ ಭಾವ ಬಗ್ಗುಂಜಿ ಮಲ್ಲಪ್ಪಶೆಟ್ಟರ ಆಶ್ರಯದಲ್ಲಿ ವ್ಯಾಪಾರ ಕಲಿತು ಕ್ರಮೇಣ ಪ್ರಸಿದ್ಧ ವರ್ತಕರಾದರು. ಅವರು ಮುಟ್ಟಿದ್ದೆಲ್ಲಾ ಚಿನ್ನವಾಗತೊಡಗಿತು. ಜೀವನದಲ್ಲಿ ಪ್ರತಿಯೊಂದರಲ್ಲೂ 'ಅದೃಷ್ಟ'ವನ್ನೇ ಕಾಣುವ ನಮ್ಮ ಜನ ಶೆಟ್ಟರ ಈ ಯಶಸ್ಸಿನಲ್ಲೂ 'ಕೋದಂಡ ದೆಶೆ', 'ಹೆಂಡತಿಯ ಕಾಲುಗುಣ' ಇತ್ಯಾದಿಯನ್ನು ಕಂಡರು. ಆದರೆ ಶೆಟ್ಟರ ಬದುಕಿನಲ್ಲಿ **ಕಠಿಣ ಪರಿಶ್ರಮ, ಕ್ರಮಬದ್ಧ ದುಡಿಮೆಯ ಜೀವನ ಮತ್ತು ಲೆಕ್ಕಾಚಾರದ ವ್ಯವಹಾರ**— ಇವು ಅತ್ಯಂತ ಪ್ರಮುಖವಾಗಿ ಎದ್ದು ಕಾಣುವ ಅಂಶಗಳಾಗಿದ್ದುದಂತೂ ನಿಜ.

ಪರೋಪಜೀವಿಗಳಿಂದ ಕಷ್ಟ-ನಷ್ಟ

ದಾನ-ಧರ್ಮಗಳ ವಿಷಯದಲ್ಲಿ ಜಾತಿ-ಮತಗಳ ಭೇದ-ಭಾವವನ್ನೂ ಮೀರಿ ಬದುಕಿದ ಶೆಟ್ಟರ ಸುತ್ತ ಕ್ರಮೇಣ ಪರೋಪಜೀವಿಗಳು ಹೆಚ್ಚಾಗಿ, ವ್ಯಾಪಾರ ನಷ್ಟಕ್ಕೆ ತಿರುಗಿತು. ಅವರು ಶಿವಮೊಗ್ಗಕ್ಕೆ ಹೋಗಿ ನೆಲೆಸಿದರು. ಈಗ ಅವರಿಂದ ಉಪಕಾರ ಪಡೆದು ಉನ್ನತಿಗೇರಿದವರೂ ದೂರಾದರು. ಎಲ್ಲವೂ 'ದೈವೇಚ್ಛೆ' ಎನ್ನುತ್ತ ನುಂಗಿಕೊಂಡ ಶೆಟ್ಟರು 2 ವರ್ಷದ ಹಿಂದೆ ಅನಾರೋಗ್ಯಕ್ಕೆ ತುತ್ತಾಗಿ, 6 ತಿಂಗಳಿಂದ ತೀವ್ರ ಬಳಲತೊಡಗಿದ್ದರು.

71 ವರ್ಷಗಳ ಸಾರ್ಥಕ ಬದುಕು ಸವೆಸಿದ ಈ ಸಂಪನ್ನ ಇಂದು ನಮ್ಮೆದುರಿಲ್ಲದಿದ್ದರೂ ಅವರ ಸ್ಮಾರಕಗಳಾಗಿ ಅವರ ದಾನಧರ್ಮದ ಸಾರ್ವಜನಿಕ ಕಾರ್ಯಗಳು ಉಳಿದುಕೊಂಡಿವೆ.



ಜಗಳಕ್ಕಿಂತ ಜಾಣತನ ಲೇಸು

ಒಂದು ನದಿಗೆ ಹಿಡುಪಿಲ್ಲದ ಸೇತುವೆಯೊಂದಿತ್ತು. ಅದು ತುಂಬಾ ಇಕ್ಕಟ್ಟಾಗಿತ್ತು. ಅಲ್ಲಿ ಒಂದು ವ್ಯಕ್ತಿ ಅಥವಾ ಒಂದು ಪ್ರಾಣಿ ಮಾತ್ರ ಹೋಗಿ ಬರುವಂತಿತ್ತು. ಹೀಗಿರುವಾಗ ಒಂದು ದಿನ ಎರಡು ನಾಯಿಗಳು ಅದೇ ಸೇತುವೆಯ ಮೇಲೆ ಎದುರುಬದುರಿನಿಂದ ಬಂದವು. ಆಗ ಅವು ನಾನು ಮೊದಲು ನದಿ ದಾಟಬೇಕು, ನಾನು ಮೊದಲು ದಾಟಬೇಕು ಎಂದು ತಮ್ಮ ತಮ್ಮೊಳಗೇ ಜಗಳಕ್ಕೆ ಶುರು ಮಾಡಿಕೊಂಡವು. ಹೀಗೆ ಜಗಳ ಮಾಡುತ್ತಾ ಮಾಡುತ್ತಾ ನದಿಯಲ್ಲಿ ಬಿದ್ದುಬಿಟ್ಟವು. ಅದಾದ ಸ್ವಲ್ಪ ದಿನಗಳ ನಂತರ ಎರಡು ಮೇಕೆಗಳು ಅದೇ ಸೇತುವೆ ಮೇಲೆ ಎದುರು ಬದುರಾಗಿ ಬಂದವು. ಅದರಲ್ಲಿ ಒಂದು ಮೇಕೆ ಸೇತುವೆಯ ಮಧ್ಯದಲ್ಲಿ ಮಲಗಿಕೊಂಡಿತು. ಆಗ ಇನ್ನೊಂದು ಮೇಕೆ ಅದರ ಬೆನ್ನಿನ ಮೇಲೆ ಹತ್ತಿ ಸೇತುವೆ ದಾಟಿತು. ಅದು ದಾಟಿದ ಮೇಲೆ ಮಲಗಿದ್ದ ಮೇಕೆ ಎದ್ದು ಹೋಯಿತು ಹೀಗೆ ಅವು ಜಾಣತನದಿಂದ ಪಾರಾದವು. ಆದ್ದರಿಂದ, ಹೀಗೆ ಜಾಣತನದಿಂದ ಆಗುವ ಕೆಲಸಕ್ಕೆ ನಾಯಿಗಳಂತೆ ವೃಥಾ ಕಚ್ಚಾಡಿ ಏಕೆ ಸಾಯಬೇಕು. ಅಲ್ಲವೇ ?

ಸಂಗ್ರಹ : 'ಎಸ್ಸಾರ್ಪಿ'

"ಒನಕೆ ಪೂಜೆ"

ಅಗ್ರಹಾರದ ಕೊನೆಯಲಿರುವಿನಲಿ
ಸಿಂಗಾಭಟ್ಟರ ಮನೆಯಿತ್ತು
ಗಂಡ-ಹೆಂಡತಿಯ ಪುಟ್ಟ ಸಂಸಾರವು
ಆನಂದದಲಿ ನಡೆದಿತ್ತು ||

ನಿತ್ಯವು ಭಟ್ಟರು ಅಗ್ರಹಾರದ
ಗಣಪತಿ ಪೂಜೆಯ ಮಾಡುತ್ತಾ
ತಮ್ಮಯ ಬಡತನದಲ್ಲೂ ಅತಿಥಿ-
ಗಳಿಗೌತಣವನ್ನು ನೀಡುತ್ತಾ ||

ಪ್ರತಿದಿನ ಭಟ್ಟರು ಹೊರಗಡೆ ಹೋಗಿ
ಕರೆತರುತಿದ್ದರು ಅತಿಥಿಯನು
ಮಡದಿಯು ರುಚಿಕರ ಅಡಿಗೆಯ
ಮಾಡಿ ಬಡಿಸುತಲಿದ್ದಳು ಊಟವನು ||

ದಿನವೂ ಅಡಿಗೆಯ ಮಾಡಿ ಸೋತಿಹ
ಗಿರಿಜೆಯು ಮನದಲಿ ಯೋಚಿಸುತ
ಮಾಡುವೆ ಬಗೆಯನು ಆಗಂತುಕರಿಗೆ
ತಡೆವೆನು ಇದನೆಂದಾಶಿಸುತ ||

ಅತಿಥಿಗಳಾಗಲೆ ಬರುವುದ ಕಂಡೂ
ಒನಕೆಯನು ಹಾಕಿ ಕೂರಿಸುತ
ಆದರದಿಂದ ಸೌಖ್ಯ ವಿಚಾರಿಸಿ
ಕುಳಿತಳು ಒನಕೆಯ ಪೂಜಿಸುತ ||

ಬೂದಿಹ ಅತಿಥಿಗಳಲೊಬ್ಬ ಕೇಳಿದನು
ಒನಕೆಯ ಪೂಜೆಯು ಯಾಕೆಂದು
ಭಟ್ಟರ ಹೆಂಡತಿ ಹೇಳಿದಳಾಗ
ನಿತ್ಯದ ಕಥೆಯಿದು ಹೀಗೆಂದು ||

"ನನ್ನಯ ಗಂಡನು ಬಂದ
ಅತಿಥಿಗಳಿಗೂಟದ ನಂತರ ಒನಕೆಯಲಿ
ಬೆನ್ನಿಗೆ ಪೂಜೆಯ ಮಾಡಿ ಕಳಿಸುವ
ಪರಿಪಾಠವಿದೆ ನಮ್ಮಲ್ಲಿ" ||

ಹೆದರಿದ ಅತಿಥಿಗಳೋಡಿದರು ಬೇಗ
ಬೆನ್ನದು ಉಳಿಯಲಿ ಎನ್ನುತ್ತಾ
ಕೆರೆಕಡೆ ತೆರಳಿದ ಭಟ್ಟರು ಬಂದರು
'ಅತಿಥಿಗಳೆಲ್ಲಿ ?' ಕೇಳುತ್ತಾ ||

ದೈನ್ಯದಿ ಗಿರಿಜೆಯು ಗಂಡನಿಗಂದಳು
"ಅವರಿಗೆ ಒನಕೆಯು ಬೇಕಂತೆ"
"ಅಷ್ಟೇ ತಾನೆ, ಅದಕೇನಂತೆ ?
ಕೊಟ್ಟು ಬರುವೆನು ಬಿಡು ಚಿಂತೆ" ||

ಭಟ್ಟರು ಒನಕೆಯ ಕೈಯಲಿ ಹಿಡಿದು
'ನಿಲ್ಲಿರಿ' ಎನ್ನುತ ಕೂಗಿದರು
'ಜೀವವು ಉಳಿದರೆ ಬೇಡಿ ತಿನ್ನುವೆವು'
ಎನ್ನುತ ಅತಿಥಿಗಳೋಡಿದರು ||

ಮಾರನೆ ದಿನಕೆ ಭಟ್ಟರ ಮನೆಗೆ
ಊಟಕೆ ಯಾರೂ ಬರಲಿಲ್ಲ
ತನ್ನಯ ತಂತ್ರದ ಗುಟ್ಟನು ಸೂತ್ರ
ಗಿರಿಜೆಯು ಹೊರಗಡೆ ಬಿಡಲಿಲ್ಲ !

● **ಬಾಳೆಕುಡಿಗೆ ಪರಮೇಶ್ವರ್**
ಬೀರೂರು

ಅರಣ್ಯ ನಾಶ ಅನ್ನಕ್ಕೆ ವಿಷ
ಕಾಡು ಬೆಳೆಸಿ ನಾಡು ಉಳಿಸಿ

ಓದುಗರ ಪತ್ರಗಳು

ಒಂದು ಪದವಿ ಪೂರ್ವ ಕಾಲೇಜಿಗೆ ಸ್ಥಳೀಯ ಪತ್ರಿಕೆ ಬೇಡವಾಗುವ ವೈಖರಿ!

ಮಾನ್ಯರೆ,

ವಿಷಯ : 'ಮುಂಜಾವು' ಪತ್ರಿಕೆಯನ್ನು ಕಮ್ಮರಡಿ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ವಜಾ ಮಾಡುವ ಬಗ್ಗೆ

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾರ್ಚ್ 88ರ ನಂತರ 'ಮುಂಜಾವು' ಪತ್ರಿಕೆಯನ್ನು ಕಳಿಸಬಾರದಾಗಿ ತಿಳಿಸಿದ್ದೆವು. ಆದಾಗ್ಯೂ ಏಪ್ರಿಲ್ ಮೊದಲ ವಾರದಲ್ಲಿ 3-4-88ರ ಪತ್ರಿಕೆ ಕಳಿಸಿರುತ್ತೀರಿ. ಇನ್ನು ಮುಂದೆ ನಮ್ಮ ವಿದ್ಯಾಲಯಕ್ಕೆ 'ಮುಂಜಾವು' ಪತ್ರಿಕೆಯ ಅಗತ್ಯವಿರುವುದಿಲ್ಲ. ಇನ್ನು ಮುಂದೆ ಪತ್ರಿಕೆಯನ್ನು ಕಳಿಸಿದಲ್ಲಿ ಚಂದಾಹಣಕ್ಕೆ ನಾವು ಜವಾಬ್ದಾರರಲ್ಲ ಎಂಬ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇವೆ

ತಮ್ಮ ವಿಶ್ವಾಸಿ,
(ಸಹಿ) ಪ್ರಾಚಾರ್ಯರು
ಸರ್ಕಾರಿ ಪದವಿಪೂರ್ವ ಕಾಲೇಜು
ಕಮ್ಮರಡಿ

(ಪ್ರಿಯ ಓದುಗರೆ,

ಈ ಪತ್ರ ಓದಿ ನಮಗೂ ಈ ಕಾಲೇಜಿನವರಿಗೂ ಚಂದಾ ಹಣದ ವಿಷಯದಲ್ಲಿ ಏನೋ ಜಗಳವಾಗಿರಬೇಕೆಂದು ನೀವು ಊಹಿಸಿದಿರಲ್ಲವೆ? ಹಾಗೇನಿಲ್ಲ! ಸೌಹಾರ್ದದಲ್ಲೇ ಚಂದಾ ಪಾವತಿ ಆಗಿದೆ. ಇದು ಬಹುಶಃ ಇಂದಿನ ನಮ್ಮ ವಿದ್ಯಾರ್ಥಿಗಳಿಗೆ ಸಿಗುವ ಸೌಜನ್ಯದ ಮೇಲ್ಪಂಕ್ತಿಯ ಒಂದು ಮಾದರಿ ಇರಬಹುದೆ!? ಎಂಬುದು ನಮ್ಮ ಸಂಶಯ. —**ಸಂ**).

ಮೀನುಗಾರಿಕೆ ಅಧಿಕಾರಿಯ ಅಸಡ್ಡೆ

ಮಾನ್ಯರೆ,

ಕೊಪ್ಪ ಮೀನುಗಾರಿಕಾ ಇಲಾಖೆಯಿಂದ ಜುಲೈ 8, 1987ರಂದು ಮೀನಿನ ಮರಿಗಳನ್ನು ತರಿಸಿದೆ. ನನ್ನಂತೆ ಅನೇಕರು ಕೊಪ್ಪದಲ್ಲಿ ತರಿಸಿದರು. ಇಲ್ಲಿಯವರೆಗೆ ಸರಿಯಾಗಿ ಆಹಾರವನ್ನು ಹಾಕಿದರೂ ಕೂಡ ಯಾವುದೇ ತರದ ಬೆಳವಣಿಗೆಯನ್ನು ನಾವು ನೋಡಿಲ್ಲ. ಇಲಾಖೆಗೆ ಹೋಗಿ ಈ ವಿಷಯ ತಿಳಿಸಿದರೆ ಸರಿಯಾಗಿ ಹಿಂಡಿ ಹಾಕಿ ಎಂದು ತಿಳಿಸುವುದೇ ವಿನಃ ಒಮ್ಮೆಯೂ ಬಂದಿಲ್ಲ. ನನ್ನಂತೆ ಹೊಸದಾಗಿ ಮೀನು ಮರಿ ಸಾಕಿ ಉತ್ಪಾದನೆ ಮಾಡಬೇಕೆಂದು ಉತ್ಸಾಹದಿಂದ ಕೆಲಸ ಮಾಡಿದ ಅನೇಕರ ಉತ್ಸಾಹಕ್ಕೆ ತಣ್ಣೀರು ಎರಚಿದಂತೆ ಆಗಿದೆ. ಇಲ್ಲಿವರೆಗೆ ನಾವು ಮಾಡಿದ ಖರ್ಚಿಗೆ ಯಾರು ಹೊಣೆ? ಸಚಿವರುಗಳು ಮೀನು ವ್ಯವಸಾಯಗಾರರಿಗೆ ಅನೇಕ ಸೌಲಭ್ಯವನ್ನು ಕಲ್ಪಿಸಿದ್ದೇವೆಂದು ಹೇಳುತ್ತಾರೆ ಇದು ಅವರ ಬರೀ ಹೇಳಿಕೆಗಳೆ? ಅಥವಾ ಅಧಿಕಾರಿಗಳ ನಿರ್ಲಕ್ಷ್ಯವೆ?

ನೊಂದ ವ್ಯವಸಾಯಗಾರರು, ಕೊಪ್ಪ.
(4 ಜನರ ಸಹಿಗಳಿವೆ.)

ಬಸ್‌ಗಳಲ್ಲಿ ಧೂಮಪಾನ ಮಾಡುವ ....

7-4-88ನ್ನು ವಿಶ್ವ ಆರೋಗ್ಯ ಸಂಸ್ಥೆಯವರು "ಧೂಮಪಾನ ರಹಿತ ದಿನ"ವೆಂದು ಘೋಷಿಸಿದರು. ಇದು ಅರಣ್ಯರೋದನವಷ್ಟೆ. ಧೂಮಪಾನಿಗಳೇ ಅಲ್ಲದೇ ಅವರು ಬಿಡುವ ಹೊಗೆ ಸೇವನೆಯಿಂದ ಶೇ. 30 ರಷ್ಟು ಜನಕ್ಕೆ ಕ್ಯಾನ್ಸರ್ ಬರುವುದೆಂದು ತಜ್ಞರ ಅಭಿಪ್ರಾಯ. ಇದು ಬಸ್ಸಿನಲ್ಲಿ ಪ್ರಯಾಣಿಸುವಾಗ ಅನಿವಾರ್ಯವಾಗಿ ಧೂಮಪ್ರಿಯರ ಕೊಡುಗೆಯಾಗುತ್ತದೆ. ವಾಹನಗಳಲ್ಲಿ ಎಚ್ಚರಿಕೆ ಫಲಕವಿದ್ದರೂ, ಸಹ ಪ್ರಯಾಣಿಕರು ವಿನಂತಿಸಿಕೊಂಡರೂ ಕೇಳದೆ ಧೂಮಪಾನ ಮಾಡುವ ಮಹಾನುಭಾವರು ಇದ್ದಾರೆ. ಕೆಲವು ವೇಳೆ ವಾಹನ ಚಾಲಕ-ನಿರ್ವಾಹಕರೇ ಧೂಮಪಾನ ಮಾಡುತ್ತಿರುವುದನ್ನು ಕಾಣಬಹುದು!

ವಾಹನಗಳಲ್ಲಿ ಕೆಲವು ಚಾಲಕ-ನಿರ್ವಾಹಕರು ಕಟ್ಟುನಿಟ್ಟಾಗಿ ಧೂಮಪಾನವನ್ನು ವಾಹನದೊಳಗೆ ನಿಷೇಧಿಸುವ ವ್ಯವಸ್ಥೆ ಕೈಗೊಂಡಿದ್ದಾರೆ. ಧೂಮಪ್ರಿಯರೂ ಸಹ ಪ್ರಯಾಣಿಕರ ಹಿತದೃಷ್ಟಿ (ತಮ್ಮ ಬಗ್ಗೆ ಕಾಳಜಿಯಿದ್ದರೆ ಧೂಮಪಾನ ಮಾಡುತ್ತಿರಲಿಲ್ಲ.)ಯಿಂದಲಾದರೂ ವಾಹನದೊಳಗೆ ಧೂಮಪಾನ ಮಾಡದಿದ್ದರೆ ಒಳಿತು. ಎಲ್ಲಾ ವಾಹನ ನಿರ್ವಾಹಕರೂ ಮನಸ್ಸು ಮಾಡಿದರೆ ತಡೆಗಟ್ಟಬಹುದು.

ಅಥವಾ "ಧೂಮಪಾನ ನಿಷೇಧಿಸಿದೆ" ಎಂಬ ಫಲಕಕ್ಕೆಬದಲಾಗಿ "ವಾಹನದೊಳಗೆ ಕೋತಿಗಳು ಧೂಮಪಾನ ಮಾಡುತ್ತಿವೆ" ಎಂದು ಫಲಕ ಹಾಕಿದರೆ ನಾಚಿಕೆಯಿಂದ ಬಿಡಬಹುದೆ? ಅಥವಾ ಕೋತಿಗಳೇ ನಾವು ಅನ್ನಬಹುದೆ!?

ಹೊಸ್ಮನೆ ರಮೇಶ್
ಗಡಿಕಲ್

ವಿದ್ಯುಚ್ಛಕ್ತಿ ಕಂಟ್ರಾಕ್ಟರ್ ಎಂದು ಹೇಳಿ ಮೋಸ ಮಾಡುವವನ ಬಗ್ಗೆ ಎಚ್ಚರ

ಜಿ. ದಯಾಕರ ಎಂಬುವವರು ಸಾರ್ವಜನಿಕರಿಗೆ ಮೋಸ ಮಾಡುತ್ತಿರುತ್ತಾರೆ. ಹೇಗೆಂದರೆ ನಾನು ಎಲೆಕ್ಟ್ರಿಕ್ ಕಂಟ್ರಾಕ್ಟದಾರನೆಂದು ಲೈಸೆನ್ಸ್ ಇದೆಯೆಂದು ಮತ್ತು ಅವರ ಹೆಸರಿನಲ್ಲಿ ಲೆಟರ್‌ಹೆಡ್ ಮಾಡಿಸಿಕೊಂಡಿರುತ್ತಾರೆ. ಮತ್ತು ಸಾರ್ವಜನಿಕರಲ್ಲಿ ಎಲೆಕ್ಟ್ರಿಕ್ ಫಿಟ್ಟಿಂಗ್ ಕೆಲಸ ಮಾಡುತ್ತೇನೆಂದು ಪೂರ್ಣ ಹಣ ಪಡೆದುಕೊಂಡು ಕೆಲಸವನ್ನು ಪ್ರಾರಂಭಮಾಡುತ್ತಾರೆ. ಹಾಗೂ ಎಲೆಕ್ಟ್ರಿಕಲ್ಸ್ ಅಂಗಡಿಯವರಲ್ಲಿ ಸಾಲವಾಗಿ ಎಲೆಕ್ಟ್ರಿಕ್ ಸಾಮಾನುಗಳನ್ನು ಪಡೆದುಕೊಂಡು ಕಂಟ್ರಾಕ್ಟ್ ಕೆಲಸ ಮುಗಿದಿಲ್ಲಾ ಕೆಲಸ ಮುಗಿದ ಕೂಡಲೇ ಹಣ ಕೊಡುತ್ತೇನೆಂದು ಅಂಗಡಿಯವರಿಗೂ ಸಹ ಮೋಸ ಮಾಡುತ್ತಾರೆ, ಈ ರೀತಿ ತುಂಬಾ ಜನರಿಗೆ ಮೋಸ ಮಾಡಿರುತ್ತಾರೆ. ಈ ರೀತಿ ವಂಚನೆಗೊಳಗಾದವರು ಅವರು ನಿಜವಾದ ಲೈಸೆನ್ಸ್ ಪಡೆದುಕೊಂಡವರು ನಿಜವೆ ಎಂದು ವಿದ್ಯುಚ್ಛಕ್ತಿ ಮಂಡಳಿಯ ಅಧಿಕಾರಿಯವರಲ್ಲಿ ವಿಚಾರ ಮಾಡಿದಾಗ ಜಿ. ದಯಾಕರರವರು ಲೈಸನ್ಸ್‌ದಾರರು ಅಲ್ಲವೆಂದು ತಿಳಿಸಿರುತ್ತಾರೆ. ಆದುದರಿಂದ ಈ ವಂಚಕ ದಯಾಕರರ ಬಗ್ಗೆ ಸಾರ್ವಜನಿಕರು ಎಚ್ಚರಿಕೆ ವಹಿಸಬೇಕಾಗಿ ಈ ಮೂಲಕ ಪ್ರಕಟಿಸಿರುತ್ತೇವೆ.

ವಂಚಿತರಾದವರು, ಕೊಪ್ಪ
(7 ಜನರ ಸಹಿಗಳಿವೆ.)

ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಯ ಕಾರ್ಯಾಲಯ, ಶಿವಮೊಗ್ಗ

ನಂ. ವ್ಯ. ಮಾ. ಸ /ಶಿ/ಲೈವಿ/ 8651 87-88 ದಿನಾಂಕ 19-4-1988

ಪ್ರಕಟಣೆ

ಶಿವಮೊಗ್ಗ ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಯ ವ್ಯಾಪ್ತಿಯಿಂದ ಶಿವಮೊಗ್ಗ, ತೀರ್ಥಹಳ್ಳಿ, ಕೊಪ್ಪ, ಶೃಂಗೇರಿ ತಾಲ್ಲೂಕುಗಳಲ್ಲಿ ನಿಯಂತ್ರಣಕ್ಕೊಳಪಡಿಸಿದ ಹುಟ್ಟುವಳಿಗಳಾದ ಅಡಿಕೆ, ಭತ್ತ, ಅಕ್ಕಿ, ರಾಗಿ, ಜೋಳ, ಬೆಲ್ಲ, ಹುಣುಸೇಹಣ್ಣು, ಸಿಗೇಕಾಯಿ, ಮೆಣಸು, ಶೇಂಗಾ, ಮೆಣಸಿನಕಾಯಿ, ದ್ವಿದಳ ಧಾನ್ಯಗಳು, ತೆಂಗಿನಕಾಯಿ, ಬಾಳೆಹಣ್ಣು, ಕುಂಬಳ ಕಾಯಿ, ಶುಂಠಿ, ಟೊಮ್ಯಾಟೋ, ಮತ್ತು ಹತ್ತಿ ಇವುಗಳ ಯಾವುದೇ ರೀತಿಯ ವ್ಯಾಪಾರ ವಹಿವಾಟುಗಳಲ್ಲಿ ತೊಡಗಿಸಿರುವ ಸಮಸ್ತ ವರ್ತಕರು, ದಲ್ಲಾಲರು, ಆಮದುದಾರರು, ರವಾನೆದಾರರು, ರೂಪಾಂತರಿಸುವವರು, ದಾಸ್ತಾನುಗಾರರು, ಹಮಾಲಿಗರು, ತೂಕದವರು, ಮಧ್ಯಸ್ಥಿಕೆದಾರರು, ಉಗ್ರಾಣದವರು ಆದಿಯಾಗಿ ಎಲ್ಲಾ ರೀತಿಯ ಪೇಟೆಯ ಕಾರ್ಯಕರ್ತರಿಗೂ ತಿಳಿಯಪಡಿಸುವುದೇನೆಂದರೆ,

1987-88ನೇ ಸಾಲಿನ ಲೈಸನ್ಸ್ ಅವಧಿಯು ಜೂನ್ 1988ರ ಅಂತ್ಯಕ್ಕೆ ಮುಗಿಯಲಿದ್ದು, ಕರ್ನಾಟಕ ರಾಜ್ಯ ವ್ಯವಸಾಯೋತ್ಪನ್ನ ಮಾರಾಟ (ನಿಯಂತ್ರಣ) ಶಾಸನ 1966ರ ಮತ್ತು ಕರ್ನಾಟಕ ರಾಜ್ಯ ವ್ಯವಸಾಯೋತ್ಪನ್ನ ಮಾರಾಟ (ನಿಯಂತ್ರಣ) ಕಾನೂನು 1968ರ ಅನ್ವಯ 1988-89ನೇ ಸಾಲಿನ ಲೈಸನ್ಸ್ ನವೀಕರಣಕ್ಕಾಗಿ ದಿನಾಂಕ 31-5-1988 ಒಳಗಾಗಿ ಅರ್ಜಿಯನ್ನು ನಿಗದಿತ ಫಾರಂನಲ್ಲಿ ಕರ್ನಾಟಕ ಸರ್ಕಾರದ ಪ್ರಕಟಣೆ ನಂ. ಆರ್. ಡಿ. ಸಿ. 265 ಎಂಎಂ. ಡಿ/84 ದಿನಾಂಕ 7-4-88ರ ಪ್ರಕಾರ ಪರಿಷ್ಕರಿಸಲಾದ ನಿಗದಿತ ಶುಲ್ಕದೊಂದಿಗೆ ಈ ಕಾರ್ಯಾಲಯಕ್ಕೆ ಸಲ್ಲಿಸಬೇಕಾಗಿರುತ್ತೆ. ಈ ಅರ್ಜಿಗಳನ್ನು ಪರಿಗಣಿಸಲು ಅರ್ಜಿಗಳೊಂದಿಗೆ ಅಗತ್ಯವಾಗಿ ಒದಗಿಸಬೇಕಾದ ದಾಖಲೆ ಮಾಹಿತಿಗಳು ಈ ಕೆಳಕಂಡಂತಿರುತ್ತವೆ.

1. ಪೂರ್ಣ ಭರ್ತಿಮಾಡಿ, ಸಹಿ ಮಾಡಿ, ಮೊಹರು ಹಾಕಿದ ಅರ್ಜಿ
2. ಮಾರಾಟ ತೆರಿಗೆ ನೋಂದಣಿ ಮತ್ತು ಕ್ಲಿಯರೆನ್ಸ್ ಪ್ರಮಾಣ ಪತ್ರದ ಪ್ರತಿ
3. ಪಾಲುದಾರಿಗೆ ಸಂಸ್ಥೆಯಾಗಿದ್ದಲ್ಲಿ ಪಾಲುದಾರಿಕೆ ಪತ್ರದ ಅಧಿಕೃತ ಪ್ರತಿ
4. ಕಾನೂನು ರೀತ್ಯಾ ನಡೆದುಕೊಳ್ಳುವ ಬಗ್ಗೆ ಐದು ರೂ. ಮೌಲ್ಯದ ಛಾಪಾ ಕಾಗದದಲ್ಲಿ ನಿಗಧಿಗೊಳಿಸಿದ ಕರಾರುಪತ್ರ
5. ನಿಗದಿಗೊಳಿಸಲ್ಪಟ್ಟ ಭದ್ರತಾ ಠೇವಣಿ
6. ಹಿಂದಿನ ವರ್ಷ ಹಾಗೂ ಈ ವರ್ಷದ 31-3-88ರ ವರೆಗಿನ ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಗೆ ಸಂಬಂಧಿಸಿದ ಲೆಕ್ಕ ಪುಸ್ತಕಗಳ ತಪಾಸಣೆ ಕಛೇರಿಯಿಂದ ಮಾಡಿಸುವುದು ಕಡ್ಡಾಯ.
7. ಮಾರುಕಟ್ಟೆ ಸಮಿತಿಗೆ ಕಾಲ ಕಾಲಕ್ಕೆ ಸಲ್ಲಿಸಬೇಕಾದ ವರದಿಗಳನ್ನು ಸಲ್ಲಿಸಿದ ಬಗೆಗಿನ ದೃಢೀಕರಣ
8. ಬಾಕಿ ಉಳಿಸಿಕೊಂಡಿರುವ ಮಾರುಕಟ್ಟೆ ಶುಲ್ಕ, ಬಾಡಿಗೆ ಹಾಗೂ ಸಾಲದ ಅಸಲು, ಬಡ್ಡಿ, ಇತ್ಯಾದಿಗಳ ಸಂಪೂರ್ಣ ಪಾವತಿ.

ದಂಡ ಶುಲ್ಕದೊಂದಿಗೆ ಅರ್ಜಿಗಳನ್ನು ಸಲ್ಲಿಸಲು ಕೊನೆಯ ಅವಕಾಶ ದಿನಾಂಕ 30-6-1988ರ ವರೆಗೆ ಮಾತ್ರ.

ನಿಗದಿಗೊಳಿಸಿದ ಅರ್ಜಿ ಫಾರಂಗಳನ್ನು ಮತ್ತು ಹೆಚ್ಚಿನ ವಿವರಗಳನ್ನು ಸಾರ್ವಜನಿಕ ರಜಾ ದಿನಗಳನ್ನು ಹೊರತುಪಡಿಸಿ ಎಲ್ಲಾ ದಿವಸಗಳು ಕಛೇರಿ ವೇಳೆಯಲ್ಲಿ ಸಮಿತಿಯ ಆಡಳಿತ ಕಛೇರಿಯಲ್ಲಿ ಪಡೆಯಬಹುದು.

(ಸಹಿ) ಎಗ್. ಬಿ. ಕೃಷ್ಣಪ್ಪ
ಅಧ್ಯಕ್ಷರು

(ಸಹಿ) **ಎಚ್. ಎಂ. ರಾಮಕೃಷ್ಣ ರೆಡ್ಡಿ**
ಕಾರ್ಯದರ್ಶಿ

ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿ, ಶಿವಮೊಗ್ಗ.

ಆರೋಗ್ಯ ಮತ್ತು ಪೌಷ್ಟಿಕಾಂಶ ಶಿಬಿರ

ತೆಂಗಿನಮನೆ : ಇಲ್ಲಿನ ಅಂಗನವಾಡಿ ಕೇಂದ್ರದಲ್ಲಿ ಆರೋಗ್ಯ ಮತ್ತು ಪೌಷ್ಟಿಕಾಂಶದ ಶಿಬಿರ ಏ. 19ರಂದು ನಡೆಯಿತು. ಚಿಕ್ಕ ಮಕ್ಕಳ ಆರೋಗ್ಯ ತಪಾಸಣೆಯನ್ನು ಉತ್ತಮೇಶ್ವರ ವೈದ್ಯಾಧಿಕಾರಿ ಡಾ|| ಕೋದಂಡರಾವ್ ನಡೆಸಿದರು. ಸಂಜೆ ನಡೆದ ಸಮಾರಂಭದ ಅಧ್ಯಕ್ಷತೆಯನ್ನು ಮಂಡಲ ಪ್ರಧಾನರಾದ ಎ.ವಿ. ಆನಂದರಾಮ ಭಟ್ ವಹಿಸಿದ್ದರು. ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಬಾಲವಿಕಾಸ ಯೋಜನಾಧಿಕಾರಿ ರಾಜೇಂದ್ರ ಬೇಕಲೆ ಕರೆ ಕೊಟ್ಟರು. ಅಂಗನವಾಡಿಯ ಚಿಕ್ಕಮಕ್ಕಳಿಂದ ಮನರಂಜನಾ ಕಾರ್ಯಕ್ರಮಗಳು ಜರುಗಿದವು. ಮಹಿಳೆಯರಿಗಾಗಿ ನಡೆಸಿದ ರಂಗೋಲಿ ಸ್ಪರ್ಧೆಯ ವಿಜೇತರಿಗೆ ಸ್ಟಾರ್ ಸ್ಪೋರ್ಟ್ಸ್ ಅಸೋಸಿಯೇಶನ್‌ರವರು ಕೊಡಮಾಡಿದ್ದ ಬಹುಮಾನವನ್ನು ಮಂಡಲ ಪ್ರಧಾನರು ನೀಡಿದರು. ಶಕುಂತಲಾಬಾಯಿ ಸ್ವಾಗತಿಸಿ ಅಂಗನವಾಡಿ ಕಾರ್ಯಕರ್ತೆ ಚಂದ್ರಾವತಿ ವಂದಿಸಿದರು.

(ವರದಿ : ಎನ್. ಕೆ. ಗಣೇಶ್)

ಕೊಪ್ಪದಲ್ಲಿ ಮೇ 10 ರಂದು ಮೆಣಸು, ಶುಂಠಿ, ಏಲಕ್ಕಿ ಬೆಳೆಗಳ ವಿಚಾರ ಸಂಕಿರಣ

ಕೊಪ್ಪ : ಸಂಬಾರ ಮಂಡಳಿಯ ಆಶ್ರಯದಲ್ಲಿ ಇಲ್ಲಿನ ಟೌನ್ ಹಾಲ್‌ನಲ್ಲಿ ಮೇ 10ರ ಬೆಳಿಗ್ಗೆ 10ಗಂಟೆಗೆ ಕಾಳು ಮೆಣಸು, ಶುಂಠಿ ಮತ್ತು ಏಲಕ್ಕಿ ಬೆಳೆಗಳ ವಿಚಾರ ಸಂಕಿರಣ ನಡೆಯುತ್ತದೆ.

ಇದರಲ್ಲಿ ಸಂಶೋಧನಾ ಕೇಂದ್ರಗಳ ವಿಜ್ಞಾನಿಗಳು, ನಬಾರ್ಡ್ ಮತ್ತು ವಿವಿಧ ಬ್ಯಾಂಕ್‌ಗಳು, ಸಂಬಾರ ಮಂಡಳಿ, ಕೃಷಿ, ತೋಟಗಾರಿಕೆ ಇಲಾಖೆಗಳು ಹಾಗೂ ಜಿಲ್ಲಾ ಪರಿಷತ್ತಿನ ಅಧಿಕಾರಿಗಳು ಭಾಗವಹಿಸುತ್ತಾರೆ.

ಇದೇ ಕಾರ್ಯಕ್ರಮ ಮೇ 9 ರಂದು ಶಿರ್ಸಿಯಲ್ಲಿ, 11 ಚಿಕ್ಕಮಗಳೂರು, 12 ಮೂಡಿಗೆರೆ ಮತ್ತು 13ರಂದು ಸಕಲೇಶಪುರದಲ್ಲಿ ನಡೆಯುತ್ತದೆ.

ನ. ರಾ. ಪುರದಲ್ಲಿ ಬಳಕೆದಾರರ ವೇದಿಕೆ

ನ. ರಾ. ಪುರ : ಈಚೆಗೆ ಹಲವು ತಿಂಗಳಿಂದ ನಿಂತುಹೋಗಿರುವ ಹೈದರಾಬಾದ್–ಶೃಂಗೇರಿ ಸರ್ಕಾರಿ ಬಸ್ಸನ್ನು (2ನೇ ಟ್ರಿಪ್) ಪುನರಾರಂಭ, ಸರ್ಕಾರಿ ಆಸ್ಪತ್ರೆಗೆ ಔಷಧಿಗಳ ಸರಬರಾಜು, ಪಶು ವೈದ್ಯ ಆಸ್ಪತ್ರೆ ಅಭಿವೃದ್ಧಿ, ಕೊಪ್ಪ–ನ. ರಾ. ಪುರ ವಿದ್ಯುತ್ 'ಎಕ್ಸ್‌ಪ್ರೆಸ್' ಲೈನಿನ ಶೀಘ್ರ ಮುಕ್ತಾಯ, ಸರ್ಕಾರಿ ಸೌದೆ ಡಿಪೋದಲ್ಲಿ ಟನ್‌ಗೆ ಸುಮಾರು 70 ರೂ.ಯಷ್ಟು ಏರಿಸಿರುವ ಸೌದೆ ಬೆಲೆ ಇಳಿತ— ಈ ಹಕ್ಕೊತ್ತಾಯಗಳ ಬಗ್ಗೆ ಇಲ್ಲಿನ 'ಬಳಕೆದಾರರ ವೇದಿಕೆ' ಸಂಬಂಧಪಟ್ಟ ಸಚಿವರು ಮತ್ತು ಅಧಿಕಾರಿಗಳನ್ನು ಒತ್ತಾಯಿಸಿದೆ.

ವೇದಿಕೆಗೆ ವಿನಾಯಕ ಮಾಳೂರುದಿಣ್ಣೆ ಅಧ್ಯಕ್ಷರಾಗಿ, ಸಾಯಿನಾಥ ಲಾಲಂಕಿ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ.

ಶಂಕರ್ ಸಾರಿಗೆಯಲ್ಲಿ ಮುಷ್ಕರದ ಛಾಯೆ

(ಒಂದನೇ ಪುಟದಿಂದ)

ಆಡಳಿತ ವರ್ಗವನ್ನೂ ಕೇಳಿಕೊಂಡು, ಕಾರ್ಮಿಕ ಅಧಿಕಾರಿಗಳ ಮೂಲಕವೂ ಪ್ರಯತ್ನಿಸಿದ್ದರೂ ಸಂಸ್ಥೆ ಸಹಕರಿಸುತ್ತಿಲ್ಲ. ಇದನ್ನು ವಿರೋಧಿಸಿ ಏ 25ರಿಂದ ವಿವಿಧ ಹಂತದ ಚಳುವಳಿಗೆ ಕಾರ್ಮಿಕರು ಇಳಿದಿದ್ದು ಧರಣಿ ಸತ್ಯಾಗ್ರಹ ಮುಂದುವರಿದಿದೆ.

ಇದರಿಂದಲೂ ಪ್ರಯೋಜನವಾಗದಿದ್ದಲ್ಲಿ, 'ನ್ಯಾಯಕ್ಕೆ ಚಳುವಳಿಯೊಂದೇ ಮಾರ್ಗ' ಎಂದು ಮನಗಂಡು ಅನಿವಾರ್ಯವಾಗಿ 10.5.88ರಿಂದ ಕೆಲಸ ನಿಲ್ಲಿಸಿ ಅನಿರ್ದಿಷ್ಟ ಕಾಲದ ಮುಷ್ಕರ ಆರಂಭಿಸಲಿರುವುದಾಗಿ ತಿಳಿಸಿರುವ ಕಾರ್ಮಿಕರು, ತಮ್ಮ ಈ ಅಳಿವು–ಉಳಿವಿನ ಹೋರಾಟಕ್ಕೆ ಸಾರ್ವಜನಿಕರ ಬೆಂಬಲ ಕೋರಿದ್ದಾರೆ ಅಲ್ಲದೆ, ಮಾಲೀಕರ ಚಮಚಾಗಳು, ಎಂಜಲು ಊಗದವರು ಕಾರ್ಮಿಕರ ವಿರುದ್ಧ ಹಬ್ಬಿಸುತ್ತಿರುವ ಅಪಪ್ರಚಾರಗಳಿಗೆ ಕಿವಿಗೊಡಬಾರದೆಂದೂ ಮನವಿ ಮಾಡಿದ್ದಾರೆ.

ಕ್ರಿಕೆಟ್ ಟೂರ್ನಿ

ಜಯಪುರ : ಲೋಕನಾಥಪುರದ ಫ್ರೆಂಡ್ಸ್ ಕ್ರಿಕೆಟರ್ಸ್ ವಾರ್ಷಿಕೋತ್ಸವದ ಅಂಗವಾಗಿ ಇಲ್ಲಿ ಏ 15, 16 ರಂದು ನಡೆದ 8 ತಂಡಗಳು ಭಾಗವಹಿಸಿದ್ದ ಕ್ರಿಕೆಟ್ ಟೂರ್ನಿಯಲ್ಲಿ ಅಂತಿಮವಾಗಿ ಆಬ್ದುಲ್ಲಾ ಇಲೆವೆನ್ ತಂಡ ಪೈ ಎಂ. ಸಿ. ಸಿ. ತಂಡದ ಮೇಲೆ ಜಯ ಗಳಿಸಿ 'ಎಂ. ಆರ್. ಸಿ. ಕಪ್' ಗೆದ್ದುಕೊಂಡಿತು. ಪಂದ್ಯ ಶ್ರೇಷ್ಠ ಮತ್ತು ಸರಣಿ ಶ್ರೇಷ್ಠ ಪ್ರಶಸ್ತಿಯನ್ನು ಕಿಶೋರ್ ಕುಮಾರ್ ಪಡೆದರು.

ಅಡಿಕೆ ಧಾರಣೆ

ಶಿವಮೊಗ್ಗ 28–4–1988

ಸರಕು : 3753 – 6410

ಬೆಟ್ಟೆ : 2701 – 3289

ಗೊರಬಲು : 1050 – 1881

ಏಲಕ್ಕಿ ಧಾರಣೆ

ಸಕಲೇಶಪುರ 23–4–1988

140–150

ಸಿದ್ದಾಪುರ 23–4–1988

151

ಮಂಗಳೂರು 30.4.1988

ಏಲಕ್ಕಿ : 140 – 160

ಕಾಳು ಮೆಣಸು : 3594

ಲೋ|| ಇಲಾಖೆ ಕಾರ್ಮಿಕರ 'ವಿಧಾನ ಸೌಧ ಚಲೋ'

ಕೊಪ್ಪ : ಲೋಕೋಪಯೋಗಿ ಇಲಾಖೆಯ ಎಲ್ಲಾ ಗ್ಯಾಂಗ್ ಕಾರ್ಮಿಕರನ್ನು ಖಾಯಂಗೊಳಿಸಿ ಸರ್ಕಾರದ 4ನೇ ದರ್ಜೆ ನೌಕರರೆಂದು ಪರಿಗಣಿಸಿ ಕನಿಷ್ಠ ವೇತನ 750 ರೂ. ನಿಗದಿಪಡಿಸಬೇಕು ಹಾಗೂ ಬೆಲೆ ಏರಿಕೆಗೆ ಅನುಗುಣವಾಗಿ ತುಟ್ಟಿ ಭತ್ಯ ನೀಡಬೇಕು ಎಂದು ಒತ್ತಾಯಿಸಿ, ಈ ಕಾರ್ಮಿಕರ ರಾಜ್ಯ ಸಂಘದ ಆಶ್ರಯದಲ್ಲಿ ನಡೆಯಲಿರುವ 'ವಿಧಾನ ಸೌಧ ಚಲೋ' ಚಳುವಳಿಯಲ್ಲಿ ಕೊಪ್ಪ, ಶೃಂಗೇರಿ, ನ. ರಾ. ಪುರ ತಾ||ಗಳಿಂದ 75 ಜನ ಕಾರ್ಮಿಕರು ಭಾಗ ವಹಿಸುವರೆಂದು ತಿಳಿಸಿರುವ ಕೊಪ್ಪ ಘಟಕದ ಕಾರ್ಯದರ್ಶಿ ಎ. ಆರ್. ರಾಮಚಂದ್ರ, ಈ ಕಾರ್ಮಿಕರನ್ನು ಕೇವಲ 10 ರೂ. ದಿನಗೂಲಿಗೆ ಹಲವು ವರ್ಷಗಳಿಂದ ದುಡಿಸಿಕೊಳ್ಳುತ್ತಿರುವ ಸರ್ಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಖಂಡಿಸಿದ್ದಾರೆ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ : ಸಿರಿಮನೆ ನಾಗರಾಜ್, ಅಚ್ಚು : ಧೀವಟಿಗೆ ಅಚ್ಚು ಕೂಟ, ಕೊಪ್ಪ.